ಮೈಸೂರು ಡಿಸ್ಟ್ರಿಕ್ಟು.

ನಂ. 2. ತಾರೀಖು 13ನೇ ಮೇ 1887.

ಚಾಮರಾಜನಗರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜನ್ನು ಕ್ರಮವಾದ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲೀ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜನ್ನು ಬರದುಕೊಟ್ಟವರ ಹೆಸರು ಅಡಿಷನ್ ಸಹ.	ಬರಸಿಕೊಂಡವರ ಹೆಸರು ಅಡಿಷನ್ ಸಹ.	ರಿಜಸ್ಟ್ರಿಗೆ ಹಾಜರಾದ ಸಾಲ್ ವಾಹಿ ತಾರೀಖು.	ರಿಜಿಸ್ಟ್ರಾದ ಸಾಲ್ ವಾಹಿ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
71 ——— 1885—86	ನಾಗವಳ್ಳಿ ಗ್ರಾಮದಲ್ಲಿ ಇರುವ ಶ್ಯಾನುಭೋಗ ಸುಬ್ಬರಾಯರ ಮಗ ಸುಬ್ಬರಾಯ	ನಾಗವಳ್ಳಿ ಗ್ರಾಮದಲ್ಲಿ ಇರುವ ವೊಪಲಿಗರ ಜಾತಿ ಕುಳ್ಳಂಕನಮಗ ಮಾರ	8—5—85	9—5—85	(30) ರೂಪಾಯಿ ಕಿಮ್ಮತ್ತಿನ ಭೂಮಿ ಶುದ್ಧ ಕ್ರಯ ಪತ್ರ.

ನಂ. 3. ತಾರೀಖು 18ನೇ ಮೇ 1887.

ಹುಣಸೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜನ್ನು ಕ್ರಮವಾದ ವಾರಸ್‌ದಾರ್‌ರಾಗಲೀ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶ ಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡಿಷನ್.	ದಸ್ತಾವೇಜನ್ನು ಬರಸಿಕೊಂಡವರ ಹೆಸರು ಮತ್ತು ಅಡಿಷನ್.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವಭಾವ.
351 ——— 1884—85	ಹುಣಸೂರು ಕಸಬೇಲಿರುವ ಮುಸಲ್ಮಾನ್ ಜಾತಿ ಮೂಸೆ ಖಾಂಸಾಹೆಬರವರ ಅಮೃತಮಹಲ್ ಇಲಾಖಾ ದರೋಗ ಮಹಮ್ಮದ್ ಗೌಸ್ 1, ಮಹಮ್ಮದ್ ಜರಾಬಿ 1, ಆಷಾಬಿ 1	ಹುಣಸೂರು ಕಸಬೇಲಿರುವ ಮುಸಲ್ಮಾನರ ಜಾತಿ ಮಹಮ್ಮದ್ ಮದೀನಾಷರೀಫ್ ಸಾಹೇಬರ ಹೆಂಡತಿನೂರಬಿ 1—2ನೇ ಹೆಂಡತಿ ಹುಮ್ಮದ್ ಮುನವರ್ ಪರೀಫ್ ಸಾಹೇಬ 1	18—2—85	20—2—85	ಕಿಮ್ಮತ್ತು ಯಿಲ್ಲದ ಸ್ಥಿರಸ್ವತ್ತಿಗೆ ಸಂಬಂಧಪಡುವ ಖುಲಾಸೆ ಪತ್ರ.

ಟಿ. ಆನಂದರಾವ್,
ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 20ನೇ ಮೇ 1887.

ಕಡೂರು ಡಿಸ್ಟ್ರಿಕ್ಟು ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಾರ್ರ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ಜಂಟರ್ ನಂಬರ್.	ದಸ್ತಾವೇಜಿನ ನಂಬರ್. ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರಸಿ ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜುಬರ ಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರೇಷನ್ ಬ್ಯಾಬ್ತು ಪೂರ್ತಿಯಾದ ತಾರೀಖು.	ರಿಜಿಸ್ಟ್ರಾಪ್ಪಿನ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	1ನೇ ಬುಕ್ಕು ನಂಬರ್ 236 ———— 1884—85 ಕೊಪ್ಪಾ ಸಬ್ ರಿಜಿಸ್ಟ್ರಾರ್.	ಸಳ್ಳೀಬೈಲ್ ಗ್ರಾಮದ ಪೇಟೆ ವಾಸಸ್ಥ ವೈಶ್ಯರ ಜಾತಿ ವ್ಯಾಪಾರ ಕಸಬಿನ ವೆಂಕಟಪ್ಪಶೆಟ್ಟರವಮಗ ಭೀಮಶೆಟ್ಟಿ	ಸಳ್ಳೀಬೈಲ್ ಮಜರೆ ಹೊಸತೋಟದವಾಸಸ್ಥ ವೆಂಕಟಿಂಣಗೌಡರ ವಮಗ ನಾಮಧಾರಿ ಜಾತಿ ಮಲ್ಲಂಣಗೌಡ	30ನೇ ಜನವರೀ 1885ನೇ ಇಸವಿ	30ನೇ ಜನವರೀ 1885ನೇ ಇಸವಿ	150 ರೂಪಾಯಿಗಳಿಗೆ ಸಳ್ಳೀಬೈಲ್ ಪೇಟೇಯಲ್ಲಿರುವ ಮನೆ ಮುಂಬಾರ 4 ಅಂಕಣವುಳ್ಳ ಹುಲ್ಲುಮನೆಯನ್ನು ಈ ಹಣಕ್ಕಾಗಿ ಅಡವಾನ ಮಾಡಿರುತ್ತೆ. ಇದಕ್ಕೆ ತಿಂಗಳು ವಂದರ 1½ ರೂಪಾಯಿ ಪ್ರಕಾರ ವಸೂಲ್ ಕೊಡುತ್ತಾ ಬರುವದಾಗಿಯೂ ಮತ್ತು ಸರ್ವಜಿತು ಸಂವತ್ಸರದ 'ಮಾಘ' ಬಹುಳ ೩ಂಗೆ ಅಸಲ್ ಹಣ ಪಾವತೀಮಾಡಿ ದಸ್ತಾವೇಜು ವಾಪಸ್ ಪಡಿಯುವದಾಗಿ.
2	1ನೇ ಬುಕ್ಕು ನಂಬರ್ 229 ———— 1884—85 ಕೊಪ್ಪಾ ಸಬ್ ರಿಜಿಸ್ಟ್ರಾರ್.	ಶಿಂಗೇರೀಕೇವೆ ಕಲ್ಲು ಕುಳ್ಳಿ ಗ್ರಾಮದ ವಾಸಸ್ಥ ನಾಮಧಾರೀ ಜಾತಿ ಮಲ್ಲಣ್ಣನವಮಗ ಗಿಡ್ಡಂಣ ಹೆಗ್ಗಡೆ	ಯಡದಾಳು ಗ್ರಾಮದ ವಾಸಸ್ಥ ಶಿವಳ್ಳಿ ಜಾತಿ ಬ್ರಾಹ್ಮಣ ಸುಬಯ್ಯನವಮಗ ಶೇಷಯ್ಯ	21ನೇ ಜನವರೀ 1885ನೇ ಇಸವಿ	21ನೇ ಜನವರೀ 1885ನೇ ಇಸವಿ	200 ರೂಪಾಯಿಗಳಿಗೆ ಶಿಗ್ಗದ ಮಾಗಣಿ ಯಡದಾಳು ಗ್ರಾಮದಲ್ಲಿರುವ ತನ್ನ ಹಿಡುವಳಿ ಬಾಬತು ಜಮೀನುಗಳನ್ನು ಶುದ್ಧ ಕ್ರಯಕ್ಕೆ ಕೊಟ್ಟು ಇರುವದಾಗಿಯು ಮತ್ತು 1880ನೇ ಇಸವಿ ಅಕ್ಟೋಬರ್ ತಾರೀಖು 27ರಲ್ಲು ರಿಜಿಸ್ಟ್ರಾದ ದಸ್ತಾವೇಜನ್ನು ಕೂಡಾ ದಾಖಲೆ ಬಗ್ಯೆ ಕೊಟ್ಟು ಯಿರುತ್ತೆಂಬದಾಗಿ.

ಜೆ. ಯೆ. ಕ್ಯಾಂಪ್‌ಬೆಲ್ ಕರ್ನಲ್,
ಆ|| ರಿಜಿಸ್ಟ್ರಾರ್.

ಖಾಸಗಿ ಪ್ರಕಟನೆ.

ಇದರಕೆಳಗೆ ರುಜು ಮಾಡಲ್ಪಟ್ಟು ಯಿರುವವರು ನಗದು ಮೊಬಲಗ್ಯೆ ಯಿಪ್ಪು ಮೂಳೆ ಆದರು ತೆಗದುಕೊಳ್ಳುವದಕ್ಕೆ ಸಿದ್ಧವಾಗಿ ಯಿದ್ದಾರೆ ಈಗಿನ ಧಾರಣೆ 28 ಪೌಂಡಿನ ಮಣ 1ಕ್ಕೆ ಆರುಆಣೆ ಮೇರಿಗೆ ತೆಗದುಕೊಳ್ಳುತ್ತಾರೆ.

ಸಿ. ಸ್ಪೀಚ್‌ಲಿ,
ಮ್ಯಾನೇಜರ್,
ಸ್ಪುವರ್ಟ್ಸ್ ವರ್ಕ್ಸ್, ಹುಣಸೂರು.

ಮೈಸೂರು ಲೋಕಲ್ ಸರ್ವಿಸ್ ಮತ್ತು ಪ್ಲೀಡರುಗಳ ಪರೀಕ್ಷೆಗಳು.

ಇ ಸ್ತಿ ಹಾ ರ್ ನಾ ಮೆ.

ಬೆಂಗಳೂರು, 26ನೇ ಮೇ 1887ನೇ ಇಸವಿ.

ಈ ವರ್ಷದ ಮೈಸೂರು ಲೋಕಲ್ ಸರ್ವಿಸ್ ಪರೀಕ್ಷೆಗಳು (ರೆವಿನ್ಯು, ಸಿವಿಲ್, ಮತ್ತು ಕ್ರಿಮಿನಲ್ ಸಹ) ಜೂನ್ ತಿಂಗಳು 13ನೇ ಸೋಮವಾರ ಬೆಳಿಗ್ಯೆ 10½ ಘಂಟೆಗೂ, ಮತ್ತು ಮಾರನೇ ದಿನಗಳಲ್ಲಿಯೂ, ಬೆಂಗಳೂರು, ಮೈಸೂರು, ಶಿವಮೊಗ್ಗೆ, ಚಿಕ್ಕಮಗಳೂರು, ಮತ್ತು ಚಿತ್ರದುರ್ಗ ಈ ಸ್ಥಳಗಳಲ್ಲಿ ಏಕಕಾಲದಲ್ಲಿ ನಡೆಯುವವು. ಈ ಕೆಳಗೆ ಬರೆದಿರತಕ್ಕ ಹೆಸರುಗಳನ್ನುಳ್ಳವರು ಅವರವರ ಹೆಸರಿಗೆ ಎದುರಾಗಿ ಸೂಚಿಸಿರತಕ್ಕ ಸ್ಥಳಗಳಲ್ಲಿ ಪರೀಕ್ಷೆಯನ್ನು ಕೊಡುವದಕ್ಕೋಸ್ಕರ ಹಾಜರಾಗಬೇಕು.